

# ವಿಜ್ಞಾನಿ

**ವಿ**ಜ್ಞಾನವೆಂದರೇನು? ಭಗವಂತನನ್ನು ವಿಶೇಷ ರೂಪದಿಂದ ಅರಿಯುವಿಕೆ. ಕಟ್ಟಿಗೆಯಲ್ಲಿ ಬೆಂಕಿಯಿದೆ ಎಂಬ ಅರಿವು ಮತ್ತು ದೃಢಶ್ರದ್ಧೆಗೆ 'ಜ್ಞಾನ' ಅಂತ ಹೆಸರು. ಅದರ ಬೆಂಕಿಯಿಂದ ಅನ್ನ ಬೇಯಿಸಿ ಉಂಡು ತಿಂದು, ಹೃಷ್ಟಪುಷ್ಟರಾಗುವುದಕ್ಕೆ 'ವಿಜ್ಞಾನ' ಅಂತ ಹೆಸರು. ಭಗವಂತನಿದ್ದಾನೆ ಎಂಬುದರ ಸ್ವಾತ್ಮಾನುಭವ ಹೊಂದುವುದಕ್ಕೆ 'ಜ್ಞಾನ' ಅಂತ ಹೆಸರು. ಆದರೆ ಆತನೊಡನೆ ಸಲಿಗೆಯಿಂದ ಮಾತಕತೆಯಾಡುವುದಕ್ಕೆ, ಆತನೊಡನೆ ವಾತ್ಸಲ್ಯ, ಸಖ್ಯ, ದಾಸ್ಯ, ಮಧುರ – ಈ ಭಾವಗಳಿಂದ ಆನಂದಪಡುವುದಕ್ಕೆ 'ವಿಜ್ಞಾನ' ಅಂತ ಹೆಸರು. ಭಗವಂತನೇ ಈ ಜೀವಜಗತ್ತು ಎಲ್ಲವೂ ಆಗಿದ್ದಾನೆ ಎಂಬುದರ ಪ್ರತ್ಯಕ್ಷದರ್ಶನಕ್ಕೆ 'ವಿಜ್ಞಾನ' ಅಂತ ಹೆಸರು.

❋ ಯಾರಿಗೆ ಬೆಳಕಿನ ಅರಿವು ಇದೆಯೋ, ಆತನಿಗೆ ಕತ್ತಲೆಯ ಅರಿವೂ ಇರುತ್ತದೆ. ಯಾರಿಗೆ ಸುಖದ ಬೋಧೆ ಇದೆಯೋ, ಆತನಿಗೆ ದುಃಖದ ಬೋಧೆಯೂ ಇರುತ್ತದೆ. ಯಾರಿಗೆ ಒಳ್ಳೆಯದರ ತಿಳಿವು ಇರುವುದೋ, ಆತನಿಗೆ ಕೆಟ್ಟದರ ತಿಳಿವೂ ಇರುತ್ತದೆ. ಯಾರಿಗೆ ನಾನು ಎಂಬುದರ ಅರಿವು ಇರುವುದೋ, ಆತನಿಗೆ ನೀನು ಎಂಬುದರ ಅರಿವೂ ಇರುತ್ತದೆ.

❋ ಬ್ರಹ್ಮಜ್ಞಾನವಸ್ಥೆಗೂ ಅತೀತವಾದದ್ದು ಬೇರೊಂದಿದೆ. ಜ್ಞಾನ ದೊರೆತ ಮೇಲೆ ವಿಜ್ಞಾನ. ಯಾರಿಗೆ ಜ್ಞಾನದ ಅರಿವು ಇದೆಯೋ, ಆತನಿಗೆ ಅಜ್ಞಾನದ ಅರಿವೂ ಇರುತ್ತದೆ. ವಸಿಷ್ಠ ತನ್ನ ನೂರು ಮಕ್ಕಳನ್ನೂ ಕಳೆದುಕೊಂಡಿದ್ದಕ್ಕಾಗಿ ಶೋಕಾಕ್ರಾಂತನಾದ. ವಸಿಷ್ಠನಂಥ ಜ್ಞಾನಿ ಏಕೆ ಪುತ್ರಶೋಕಾಕ್ರಾಂತನಾಗಬೇಕು ಎಂಬುದಾಗಿ ಲಕ್ಷ್ಮಣ ರಾಮನನ್ನು ಕೇಳಿದಾಗ, ಆತ ಹೇಳಿದ: 'ನೀನು ಜ್ಞಾನಾಜ್ಞಾನಗಳಿಗೆ ಅತೀತನಾಗು. ಯಾರಲ್ಲಿ ಜ್ಞಾನವು ಇರುತ್ತದೆಯೋ, ಆತನಲ್ಲಿ ಅಜ್ಞಾನವೂ ಇರುತ್ತದೆ. ಕಾಲಿಗೆ ಮುಳ್ಳು ಚುಚ್ಚಿಕೊಂಡರೆ, ಬೇರೊಂದು ಮುಳ್ಳನ್ನು ಹುಡುಕಿ ತಂದು ಅದನ್ನು ತೆಗೆಯಬೇಕಾಗುತ್ತದೆ; ಬಳಿಕ ಎರಡನೆ ಮುಳ್ಳನ್ನೂ ಬಿಸಾಡಿಬಿಡಬೇಕು.

❋ ಕೆಲವರು ಹಾಲಿನ ವಿಷಯವಾಗಿ ಕೇಳಿದ್ದಾರೆ, ಇನ್ನು ಕೆಲವರು ಅದನ್ನು ನೋಡಿದ್ದಾರೆ, ಮತ್ತೆ ಕೆಲವರು ಅದನ್ನು ಕುಡಿದಿದ್ದಾರೆ. ಯಾರು ಅದರ ವಿಷಯವಾಗಿ ಕೇವಲ ಕೇಳಿದ್ದಾನೋ ಆತ 'ಅಜ್ಞಾನಿ'. ಯಾರು ಅದನ್ನು ನೋಡಿದ್ದಾನೊ ಆತ 'ಜ್ಞಾನಿ'. ಆದರೆ ಯಾರು ಅದನ್ನು ಕುಡಿದಿದ್ದಾನೊ ಆತ 'ವಿಜ್ಞಾನಿ'.

❋ ವಿಜ್ಞಾನ ದೊರೆತ ನಂತರ ಸಂಸಾರದಲ್ಲೂ ಇರಬಹುದು. ಆಗ ಬಹಳ ಸ್ಪಷ್ಟವಾಗಿ ಅನುಭವವಾಗುತ್ತದೆ, ಭಗವಂತನೇ ಈ ಜೀವ ಜಗತ್ತು ಆಗಿದ್ದಾನೆ. ಆತ ಈ ಸಂಸಾರದಿಂದ ಪ್ರತ್ಯೇಕವಲ್ಲ ಎಂಬುದಾಗಿ.

❋ ಚಾವಣಿಯ ಮೇಲಕ್ಕೆ ಹತ್ತಿದ ನಂತರ ಗೊತ್ತಾಗುತ್ತದೆ, ಯಾವ ವಸ್ತುಗಳಿಂದ – ಇಟ್ಟಿಗೆ, ಸುಣ್ಣ, ಇಟ್ಟಿಗೆ ಚೂರು – ಚಾವಣಿ ತಯಾರಾಗಿದೆಯೋ, ಅದೇ ವಸ್ತುಗಳಿಂದ ಹಂತಗಳೂ ತಯಾರಾಗಿವೆ ಎಂದು.

❋ ಅಜ್ಞಾನ, ಜ್ಞಾನ, ವಿಜ್ಞಾನ. ಜ್ಞಾನಿಗೆ ತೋರುತ್ತದೆ, ಇರುವವನು ಭಗವಂತನೊಬ್ಬನೇ, ಆತನೇ ಕರ್ತೃ, ಆತನೇ ಸೃಷ್ಟಿ – ಸ್ಥಿತಿ – ಪ್ರಳಯ ಕಾರ್ಯ ಮಾಡುತ್ತಾನೆ ಎಂಬುದಾಗಿ. ವಿಜ್ಞಾನಿಗೆ ತೋರುತ್ತದೆ, ಆತನೇ ಎಲ್ಲವೂ ಎಂಬುದಾಗಿ.

❋ ಜ್ಞಾನಿ–ಸಾಧುವಿಗೂ, ವಿಜ್ಞಾನಿ–ಸಾಧುವಿಗೂ ವ್ಯತ್ಯಾಸವಿದೆ. ಜ್ಞಾನಿ–ಸಾಧು ಕುಳಿತುಕೊಳ್ಳುವ ವಿಧಾನವೇ ಬೇರೆ. ಆತ ಮೀಸೆ ಹುರಿ ಮಾಡಿ ಕುಳಿತುಕೊಳ್ಳುತ್ತಾನೆ. ಯಾರಾದರೂ ಆತನನ್ನು ನೋಡಲು ಬಂದರೆ ಅವರನ್ನು ಕೇಳುತ್ತಾನೆ: 'ಒಳ್ಳೇದು, ಏನಾದರೂ ಪ್ರಶ್ನೆ ಕೇಳುವುದು ಇದೆಯೆ?' ಆದರೆ ಯಾರು ಭಗವಂತನನ್ನು ಸತತ ದರ್ಶಿಸುತ್ತ ಆತನೊಡನೆ ಸ್ನೇಹಭಾವದಿಂದ ಮಾತುಕತೆಯಾಡುತ್ತಿರುವನೋ, ಆತ ಕೆಲವು ವೇಳೆ ಜಡನ ಹಾಗೆ, ಇನ್ನು ಕೆಲವು ವೇಳೆ ಪಿಶಾಚಿಯ ಹಾಗೆ, ಮತ್ತೆ ಕೆಲವು ವೇಳೆ ಬಾಲಕನ ಹಾಗೆ, ಮತ್ತೂ ಕೆಲವು ವೇಳೆ ಉನ್ಮತ್ತನ ಹಾಗೆ ವರ್ತಿಸುತ್ತಿರುತ್ತಾನೆ.

ಸಮಾಧಿಸ್ಥನಾದಾಗ ಬಾಹ್ಯಜ್ಞಾನಶೂನ್ಯನಾಗಿ ಜಡನಂತೆ ಕಾಣಬರುತ್ತಾನೆ. ಎಲ್ಲವೂ ಬ್ರಹ್ಮಮಯವಾಗಿರುವುದನ್ನು ನೋಡಿ ಆತ ಪಿಶಾಚಿಯ ಹಾಗೆ ವರ್ತಿಸುತ್ತಾನೆ; ಶುಚಿ, ಅಶುಚಿಯ ಬೋಧೆ ಇರದು. ಆತನ ನಡೆ, ನುಡಿ, ವ್ಯವಹಾರ ನೋಡಿ ಜನ ಭಾವಿಸಿಕೊಳ್ಳುತ್ತಾರೆ ಆತ ಹುಚ್ಚ ಎಂದು.

❋ ಬಾಲಕನ ಅವಸ್ಥೆಯಲ್ಲಿ ಇರುವಾಗ, ಏನೋ ಅರಿಯದ ಹಸುಳೆಯ ಹಾಗೆ, ಚಿಕ್ಕ ಹುಡುಗನಂತೆ ಹುಡುಗಾಟವಾಡುತ್ತಿರುತ್ತಾನೆ, ಮತ್ತೆ ಕೆಲವು ವೇಳೆ ಉಪದೇಶವೀಯುತ್ತಾನೆ – ವೀರ ಯುವಕ ವ್ಯಕ್ತಿಯ ಹಾಗೆ.

❋ ಜ್ಞಾನದ ಮೊದಲನೆ ಚಿಹ್ನೆ ಶಾಂತಸ್ವಭಾವ, ಎರಡನೆಯದು ಅಭಿಮಾನಶೂನ್ಯತೆ. ಜ್ಞಾನಿ ಸಾಧುಗಳ ಮುಂದೆ ತ್ಯಾಗಿ. ಕರ್ಮಕ್ಷೇತ್ರದಲ್ಲಿ – ಅಂದರೆ ಲೆಕ್ಚರ್–ಗಿಕ್ಚರ್ ಕೊಡುವ ಸಮಯದಲ್ಲಿ ಸಿಂಹಸದೃಶ, ಹೆಂಡತಿಯ ಎದುರು ರಸಿಕರಾಜ, ರಸಿಕ ಪಂಡಿತ.

❋ ಬ್ರಹ್ಮಜ್ಞಾನವನ್ನು ಕೃಪೆಮಾಡಿದ ನಂತರವೂ ಭಗವಂತ ಭಕ್ತನಲ್ಲಿ ಸ್ವಲ್ಪ 'ಅಹಂ' ಅನ್ನು ಉಳಿಸಿಬಿಟ್ಟಿರುತ್ತಾನೆ. ಆ 'ಅಹಂ' 'ಭಕ್ತನ ಅಹಂ' 'ವಿದ್ಯೆಯ ಅಹಂ'. ಆ 'ಅಹಂ' ಮೂಲಕ ಭಗವಂತನ ಅನಂತ ಲೀಲೆಯನ್ನು ಆಸ್ವಾದಿಸುತ್ತಾನೆ.

**ಶ್ರೀರಾಮಕೃಷ್ಣ ವಚನವೇದ** ದಿಂದ

# ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ** ಕನ್ನಡಕ್ಕೆ: **ಕುಮಾರಿ ಪಿ.ಉಷಾ**

ಭಾಗ-೭



''**ಮ**ತ್ತೊಂದು ದಿನ ಧ್ಯಾನ ಮಾಡಲು ಕಲಿಸುತ್ತಿದ್ದರು – ನಾನು ಚಿಕ್ಕವನಾದರೂ ಕೂಡ ನನ್ನನ್ನು ಏಕಾಂತಕ್ಕೆ ಕರೆದುಕೊಂಡರು. ನನ್ನ ಮನದಲ್ಲಿ ಆಗ ಸ್ವಲ್ಪವೂ ಗೊಂದಲವಿರುತ್ತಿರಲಿಲ್ಲ. ದೊಡ್ಡವನಾದ ಮೇಲೂ ಸೊಂಟದ ಮೇಲೆ ಬಟ್ಟೆಯನ್ನು ಸುತ್ತಿಕೊಂಡು ಹೊರಗೆ ಹೋಗುತ್ತಿದ್ದೆ, ಶೌಚಕ್ಕೆ ಹೋಗುತ್ತಿದ್ದೆ. ಜನರೆದುರು ನನಗೆ ನಾಚಿಕೆ ಯಾಗುತ್ತಿರಲಿಲ್ಲ. ನನ್ನ ಪ್ರಾಯದ ಹುಡುಗರಿಗೆ ಹಾಗೆ ಮಾಡಲು ನಾಚಿಕೆಯಾಗುತ್ತಿತ್ತು, ಆದರೆ ನನಗಾಗುತ್ತಿರಲಿಲ್ಲ. 'ನಾಚಿಕೆ ಇಲ್ಲ ದಿರುವುದು' ಎಂದರೇನೆಂದೇ ನನಗಾಗ ಅರ್ಥವಾಗುತ್ತಿರಲಿಲ್ಲ.

''ಆಗ ನನ್ನ ಮನಸ್ಸು ಗೊಂದಲಕ್ಕೊಳಗಾಗುತ್ತಿರಲಿಲ್ಲ. ಆದರೂ ಠಾಕೂರರು ನನಗೆ ಕಲಿಸಿದರು: 'ನೋಡು, ಧ್ಯಾನಿಸುತ್ತಿರುವಾಗ ಮನಸ್ಸು ಆಕಡೆ, ಈಕಡೆ ಹೋದರೆ ಮನೋಯೋಗದಿಂದ ಚೆನ್ನಾಗಿ ಜಪ ಮಾಡು. ಅದರಿಂದಲೂ ಸಾಧ್ಯವಾಗದಿದ್ದರೆ ಜಪದ ಮೇಲಿನ ಆಸಕ್ತಿಯನ್ನೇ ಬಿಟ್ಟು ನಿನಗೆ ಹೇಗೆ ಬೇಕೋ ಹಾಗೆ ಧ್ಯಾನ ಮಾಡು. ಈ ರೀತಿ ಧ್ಯಾನ ಮಾಡಿದಾಗ ಜಪವೂ ಇರುತ್ತದೆ, ಆಂತರಿಕವಾಗಿ ಧ್ಯಾನವೂ ಇರುತ್ತದೆ. ಈ ರೀತಿಯಾಗಿ ಭಾವಿಸು: 'ಹೃದಯ ಮಂದಿರದಲ್ಲಿ ನನ್ನ ಇಷ್ಟದೇವತೆ ನೆಲೆಸಿದ್ದಾನೆ. ಸುಂದರ, ಶಾಂತ ನಗುಮುಖ.' ಆರತಿ ಮಾಡುತ್ತಿರುವಂತೆ ಭಾವಿಸು – ದೀಪ ದಾರತಿ, ಕರ್ಪೂರದಾರತಿ, ಹೂವು, ಚಾಮರಗಳಿಂದ – ಹೀಗೆ ಆರತಿ ಮುಗಿಯುತ್ತಲೇ ಇಲ್ಲವೆಂದು ಭಾವಿಸು. ಬಹಳ ಹೊತ್ತಿನ ಬಳಿಕ ಆರತಿಯಾದ ಮೇಲೆ ಹೂವಿನ ಮಾಲೆಯನ್ನು ಪೋಣಿಸಲು ನೀನು ಕುಳಿತೆ – ತುಂಬ ಚೆಲುವಾದ ಹೂಗಳು, ಎಷ್ಟು ಸುಂದರವೋ ಅಷ್ಟೇ ಸುಗಂಧಭರಿತವೂ ಕೂಡ. ದೊಡ್ಡ ಮಲ್ಲಿಗೆ ಹೂವಿನ ದಿಂಡು, ಇನ್ನೂ ಅನೇಕ ಹೂಗಳು. ಆತನ ಪಾದಪದ್ಮಗಳಿಗೆ ಹಿಡಿಹಿಡಿಯಾಗಿ ಪದ್ಮಪುಷ್ಪದ ಅಂಜಲಿಯನ್ನು ಅರ್ಪಿಸು – ಕೆಂದಾವರೆ, ಬಿಳಿದಾವರೆ, ತಾವರೆ ಹೂಗಳು ಮುಗಿದ ಮೇಲೆ ದಾಸವಾಳ ಆರಂಭವಾಯಿತು. ದಾಸವಾಳದ ಸ್ತೂಪವೇ ಆಯಿತು. ಅದಾದ ಮೇಲೆ ಇನ್ನೂ ಅನೇಕ ಹೂಗಳು – ಬಿಳಿ ಹೂ, ನಾನಾ ಬಗೆಯ ಹೂಗಳು. ಒಂದಾದ ಮೇಲೊಂದು – ಮುಗಿಯಲು ಬಿಡಬೇಡ! ಹೂಗಳ ನಂತರ ನಾನಾಬಗೆಯ ಫಲಮೂಲ, ಸಿಹಿತಿಂಡಿ; ಅದನ್ನು ಸುಂದರವಾಗಿ ಸಜ್ಜುಗೊಳಿಸಿ ನಿವೇದಿಸುತ್ತಿರುವೆ. ಹೀಗೆ ಮನಸ್ಸನ್ನು ಅದರಲ್ಲಿ ತೊಡಗಿಸಬೇಕು. ಮನಸ್ಸು ಯಾವಾಗಲೂ ವಿಷಯಸುಖಗಳತ್ತ ಸಾಗುತ್ತದೆ.(ರೂಪ, ರಸ, ಗಂಧ, ಶಬ್ದ, ಸ್ಪರ್ಶ) ಈ ಸುಖಗಳನ್ನು ಭಗವಂತನೆಡೆಗೆ, ಇಷ್ಟದೇವತೆಯೆಡೆಗೆ ತಿರುಗಿಸಿದರೆ ಅವುಗಳ ದೋಷಗಳು ಕಳೆದುಹೋಗುತ್ತವೆ.'

''ಸದಾ ಭಗವಂತನ ಸ್ಮರಣೆ, ಮನನ, ಆತನನ್ನೇ ಸಂಪೂರ್ಣ ಅವಲಂಬಿಸುವುದು – ಇದೇ ಸಾಧನೆ, ಇದೇ ಕೊನೆಯ ಮಾತು. ನಾವು ಠಾಕೂರರನ್ನು ಕಂಡಿದ್ದೇವೆ. ಅವರ ಬಳಿ ಕಲಿತು ನಮ್ಮ ಸ್ವಂತ ಜೀವನವನ್ನು ಸಾಧ್ಯವಾದಷ್ಟು ರೂಪಿಸಿಕೊಂಡಿದ್ದೇವೆ. ಠಾಕೂರರ ಹಾಗೂ ಅವರ ಶಿಷ್ಯರುಗಳ ಜೀವನವನ್ನು ನೋಡಿ ನಿಮ್ಮ ಸ್ವಂತ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸದಿದ್ದರೆ, ಇಷ್ಟೊಂದು ಕೆಲಸಕಾರ್ಯ ಮಾಡುವುದರಲ್ಲಿ ಅರ್ಥವಿಲ್ಲ. ಪ್ರತಿಕ್ಷಣವೂ ಪ್ರಾರ್ಥನೆ ಮಾಡು: 'ಠಾಕೂರ್, ದರ್ಶನ ನೀಡು, ದರ್ಶನ ನೀಡು. ಯೂರೋಪು, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾದ ಹೀಗೆ ಎಷ್ಟೊಂದು ದೂರದೇಶಗಳ ಜನರು ನಿನ್ನನ್ನು ನೋಡುತ್ತಾರೆ, ಅವರಿಗೆ ನಿನ್ನ ಭಾವ ತಲುಪುತ್ತಿದೆ! ಅಲ್ಲಿನ ಅದೆಷ್ಟು ಜನರಿಗೆ ನೀನು ಸ್ವಪ್ನದರ್ಶನ ವನ್ನು ನೀಡುತ್ತೀಯಾ, ನನಗೇಕೆ ದರ್ಶನ ನೀಡುವುದಿಲ್ಲ? ನಾವು ನಿನಗೆ ಇಷ್ಟು ಸಮೀಪದಲ್ಲಿದ್ದೇವೆ, ನಮಗೂ ವಿಶ್ವಾಸ, ವ್ಯಾಕುಲತೆ ಗಳನ್ನು ನೀಡು; ತೀವ್ರ ವೈರಾಗ್ಯವನ್ನು ನೀಡು. 'ಇಂದೂ ಭಗವಂತನನ್ನು ನೋಡಲಿಲ್ಲ!' ಎಂಬ ಭಾವ ಪ್ರತಿದಿನವೂ ನಿನ್ನನ್ನು ಕೊರೆಯುತ್ತಿರಬೇಕು.''

* * *

ನಿನ್ನೆ ರಾತ್ರಿ ಎರಡು ಗಂಟೆಯ ಸಮಯದಲ್ಲಿ ಎಚ್ಚರಗೊಂಡೆ. ನನಗೆ ಭಾರೀ ಆನಂದವಾಗುತ್ತಿತ್ತು. ಏಕೋ ತಿಳಿಯೆ, ಕಿಟಕಿಯನ್ನು ತೆಗೆದು ಹಾಡಲಾರಂಭಿಸಿದೆ:

(೧) **ಪರ್ವತ ಪಾಥಾರ್ ...** *(ಗಿರಿಶಿಖರ ವ್ಯೋಮದಲ್ಲಿ..)*

(೨) **ಏಕ್ ಸನಾತನ ಪುರುಷ ನಿರಂಜನ**
**ಆದಿ ಅನಾದಿ ಗುರು!.....**
*(ಏಕ ಪುರಾತನ ಪುರುಷ ನಿರಂಜನ*
*ಪಾದದಿ ಚಿತ್ತವ ನಿಲ್ಲಿಸೋ..)*

'' ಈ ಹಾಡು 'ಕಥಾಮೃತ'(ಶ್ರೀರಾಮಕೃಷ್ಣ ವಚನವೇದದ ಮೂಲ ಬಂಗಾಳಿ ಶೀರ್ಷಿಕೆ) ದಲ್ಲಿದೆ; ಅದನ್ನು ಏರುಧ್ವನಿಯಲ್ಲಿ ಹಾಡಿದೆ. ಗೋಪಾಲ್ ಮಹಾರಾಜರಿಗೆ (ಸ್ವಾಮಿ ಗುಣಾತೀತಾನಂದ) ಅದು ಕೇಳಿಸಿತು. ಶರೀರ ಸ್ವಲ್ಪ ಚೆನ್ನಾಗಿದ್ದ ದಿನ ಯಾವ ಬಂಧನವೂ ಇರುವುದಿಲ್ಲ. ನೀನೇ ನೋಡುತ್ತಿದ್ದೀಯಲ್ಲಾ, ನಾನು ಹುಡುಗರೊಂದಿಗೂ ಜಗಳವಾಡುತ್ತೇನೆ.

''ಬೇಲೂರಿನಲ್ಲೊಂದು ದಿನ, ಇನ್ನೂ ಬೆಳಗಾಗಿರಲಿಲ್ಲ; ಆಗಲೇ ಎದ್ದುಬಿಟ್ಟೆ. ಎದ್ದ ತಕ್ಷಣ ಸ್ವಾಮೀಜಿಯನ್ನು ನೋಡುವ ಆಸೆಯಾಯಿತು. ಅವರ ಕೋಣೆಯ ಬಳಿಗೆ ಹೋಗಿ, ನಿಧಾನವಾಗಿ ಪ್ರವೇಶಿಸಿದೆ. ಸ್ವಾಮೀಜಿ ಮಲಗಿದ್ದಾರೆ ಎಂದು ಭಾವಿಸಿದೆ. ಆದರೆ ಅವರು ಎಚ್ಚರವಾಗಿದ್ದರು. ಒಳಗೆ ಕಾಲಿಡುತ್ತಲೇ ಹಾಡಿನ ರೂಪದಲ್ಲಿ ಉತ್ತರ ಸಿಕ್ಕಿತು:

Knocking Knocking – who is there?
Waiting, Waiting – O how fair!
Waiting, waiting – brother dear.

''ಆಗ ಬೇಲೂರು ಮಠ ನೀಲಾಂಬರ ಮುಖರ್ಜಿಯ ತೋಟದಲ್ಲಿತ್ತು. ಒಂದು ದಿನ ರಾತ್ರಿ ಎರಡು ಗಂಟೆಯವರೆಗೂ ವೇದಾಂತದ ಚರ್ಚೆ ನಡೆಯಿತು. ಮಾನವನ ಆತ್ಮಕ್ಕೆ ಅಧೋಗತಿ ಬರುವುದೆ? ಪುನರ್ಜನ್ಮ ಇದೆಯೆ, ಇಲ್ಲವೆ? ಸ್ವಾಮೀಜಿ ಚರ್ಚೆ ಶುರುಮಾಡಿ ಮಧ್ಯಸ್ಥಿಕೆ ವಹಿಸಿ, ಸುಮ್ಮನಿದ್ದುಕೊಂಡು ನಗುತ್ತಿದ್ದಾರೆ. ಯಾವ ಪಕ್ಷಕ್ಕೆ ಮುಂದುವರೆಸಲು ಸಾಧ್ಯವಾಗುತ್ತಿಲ್ಲವೋ ಅವರಿಗೆ ಹೊಸ ವಿಚಾರವನ್ನು ಕೊಟ್ಟು ಪ್ರೇರಣೆ ನೀಡುತ್ತಿದ್ದಾರೆ. ರಾತ್ರಿ ೨ ಗಂಟೆಯ ನಂತರ ಚರ್ಚೆ ನಿಲ್ಲಿಸಿದಾಗ ಎಲ್ಲರೂ ಮಲಗಿ ನಿದ್ರಿಸಿದರು. ೪ ಗಂಟೆ ಬಾರಿಸುತ್ತಲೇ ಸ್ವಾಮೀಜಿ ನನ್ನನ್ನೆಬ್ಬಿಸಿದರು. ಅವರು ಮೊದಲೇ ತಮ್ಮ ಕೆಲಸಗಳನ್ನೆಲ್ಲ ಮುಗಿಸಿ, ಯಾವುದೋ ಹಾಡನ್ನು ಗೊಣಗುಟ್ಟುತ್ತಾ ನಡೆದಾಡುತ್ತಿದ್ದಾರೆ. ಅವರು ನನಗೆ ಹೇಳಿದರು, 'ಗಂಟೆ ಬಾರಿಸು. ಎಲ್ಲರೂ ಏಳಲಿ. ಅವರು ಮಲಗಿರುವುದನ್ನು ನನಗೆ ನೋಡಲಾಗುತ್ತಿಲ್ಲ.' ಅದಕ್ಕೆ ನಾನೆಂದೆ, 'ಈಗ ತಾನೆ ಎರಡು ಗಂಟೆಗೆ ಮಲಗಿದ್ದಾರೆ, ಸ್ವಲ್ಪ ನಿದ್ರಿಸಲಿ.'

''ಅದಕ್ಕೆ ಸ್ವಾಮೀಜಿ ಕಟುವಾಗಿ ಹೇಳಿದರು, 'ಏನು? ಎರಡು ಗಂಟೆಗೆ ಮಲಗಿದರೆಂದು ಆರು ಗಂಟೆಗೆ ಏಳಬೇಕೆ? ಅದನ್ನು ನನಗೆ ಕೊಡು. ನಾನೇ ಗಂಟೆ ಬಾರಿಸುತ್ತೇನೆ. ನಾನಿರುವಾಗಲೇ ಹೀಗೆ ಮಾಡುತ್ತೀರಲ್ಲ ! ನಾನು ಮಠವನ್ನು ಸ್ಥಾಪಿಸಿದ್ದು ನಿದ್ದೆ ಮಾಡಲೆಂದೇ?' ಆಗ ನಾನು ಬಹಳ ಜೋರಾಗಿಯೇ ಗಂಟೆ ಬಾರಿಸಿದೆ. ಎಲ್ಲರೂ ಥಟ್ಟನೆ ಎದ್ದು ಕೂಗಾಡತೊಡಗಿದರು. 'ಯಾರವನು? ಯಾರವನು?' ಅಂತ. ಅವರು ನನ್ನನ್ನು ಸೀಳಿಬಿಡುತ್ತಿದ್ದರೋ ಏನೋ. ಆದರೆ ನನ್ನ ಹಿಂದೆ ಸ್ವಾಮೀಜಿ ನಿಂತು ನಗುತ್ತಿರುವುದನ್ನು ನೋಡಿ, ಎಲ್ಲರೂ ಕಣ್ಣುಜ್ಜಿಕೊಳ್ಳುತ್ತಾ ಅಲ್ಲಿಂದ ಆ ಕೋಣೆಯತ್ತ ಹೊರಟುಹೋದರು.

''ಬಹುಶಃ ಬೇಲೂರಿನಲ್ಲಿರಬೇಕು – ಹರಿ ಮಹಾರಾಜರು ಒಂದು ದಿನ ಧ್ಯಾನಕ್ಕೆ ಹೋಗಲಿಲ್ಲವೋ, ಅಥವಾ ತಡವಾಗಿತ್ತೋ ಗೊತ್ತಿಲ್ಲ. ಸ್ವಾಮೀಜಿ ಕೇಳಿದರು, 'ಏಕೆ?' ಅಂತ. ಹರಿ ಮಹಾರಾಜರು ಉತ್ತರಿಸಿದರು, 'ಸ್ವಲ್ಪ ಚಳಿ ಜ್ವರ ಬಂದ ಹಾಗಿದೆ.' ಮೊದಲು ಸ್ವಾಮೀಜಿ ಒಂದೇ ಸಮನೆ ಬೈದರು. 'ಈಗಲೂ ಇದೇ ದೇಹ ದೇಹ! ಛಿ!' ಹರಿ ಮಹಾರಾಜರು ನಮ್ಮೆಲ್ಲರ ಪೈಕಿ ಕಠೋರ ಸ್ವಭಾವದವರು, ತಪಸ್ವಿ, ಸಹನಶೀಲರು. ಸ್ವಾಮೀಜಿ ಮಾತುಗಳನ್ನು ಕೇಳಿ ಮೌನವಾಗಿದ್ದರು. ನಂತರ ಸ್ವಾಮೀಜಿ ಅವರನ್ನು ಪ್ರೀತಿಯಿಂದ ಸಂತೈಸಿದರು, 'ನಿಮ್ಮನ್ನೆಲ್ಲ ಏಕೆ ಬಯ್ಯುತ್ತೇನೆ ಗೊತ್ತೆ? ನೀವೆಲ್ಲ ಠಾಕೂರರ ಮಕ್ಕಳು. ನಿಮ್ಮನ್ನು ನೋಡಿ ಪ್ರಪಂಚ ಕಲಿಯುತ್ತದೆ. ನಮ್ಮಲ್ಲಿ ಸ್ವಲ್ಪ ಕುಂದುಕೊರತೆಗಳನ್ನು ನೋಡಿದರೂ ನನಗೆ ಬಹಳ ಬೇಸರವಾಗುತ್ತದೆ. ನೀವು ಸ್ವಲ್ಪ ಅಜಾಗರೂಕರಾಗಿದ್ದರೆ, ಜನರು ಮತ್ತಷ್ಟು ಅಜಾಗರೂಕರಾಗುತ್ತಾರೆ. ಠಾಕೂರರು ಹೇಳುತ್ತಿದ್ದರಲ್ಲವೆ, 'ನಾನು ೧೬ ಪಾಲು ಮಾಡಿದರೆ ನೀವು ೧ ಪಾಲಾದರೂ ಮಾಡಿ. ಅದೇ ರೀತಿ ನೀವೇನಾದರೂ ೧ ಪಾಲು ಮಾಡಿದರೆ ಜನರು ಅದರಲ್ಲಿ ೧೬ನೆಯ ೧ ಪಾಲು ಮಾಡುತ್ತಾರೆ. ನೀವು ಅಷ್ಟೂ ಕೂಡ ಮಾಡದಿದ್ದರೆ ಅವರೆಲ್ಲಿ ನಿಲ್ಲುವರು?' ಅಂತ?' ''

ರಾತ್ರಿ ೮ ಗಂಟೆಗೆ ಕೋಣೆಯಲ್ಲಿ ಬಾಬಾ ಒಬ್ಬ ಬ್ರಹ್ಮಚಾರಿಗೆ ಹೇಳುತ್ತಿದ್ದಾರೆ, ''ಊಟವಾದ ಮೇಲೆ ಒಂಬತ್ತು ಗಂಟೆಯ ಹೊತ್ತಿಗೆ ಬಾ. 'ಸ್ಮೃತಿಕಥೆ'ಯನ್ನು ಬರೆಸುತ್ತೇನೆ. ಆಗ ತುಂಬಾ ಹೊತ್ತು ಬರೆಸಬಹುದು.'' ಬ್ರಹ್ಮಚಾರಿಗಳು ಊಟವಾದ ಮೇಲೆ ತನಗೆ ಬರೆಯುವುದು ಕಷ್ಟವೆಂದು ಹೇಳಿದರೆಂದು ತೋರುತ್ತದೆ. ಅದಕ್ಕೆ ಬಾಬಾ ಸ್ವಲ್ಪ ದನಿ ಏರಿಸಿ ಹೇಳುತ್ತಿದ್ದಾರೆ, ''ಏನು? ಆಗುವುದಿಲ್ಲವೆ? ಊಟವಾದ ಕೂಡಲೆ ನಿದ್ರೆ? ಒಂಬತ್ತು ಗಂಟೆಗೇನೆ? ಜಪಧ್ಯಾನವಂತೂ ಬಿಟ್ಟೇಬಿಡು, ಸ್ವಲ್ಪ ಓದುವುದೂ ಬೇಡವೇ? ನಾನು ಹೇಳುತ್ತಿದ್ದೇನೆ, ಆದರೂ ಆಗುವುದಿಲ್ಲವೆಂದು ನೀನು ಹೇಳುತ್ತಿದ್ದೀಯಲ್ಲಾ! ನಾನು ಮುದುಕ, ಎಚ್ಚರವಿದ್ದು ಆಲೋಚಿಸುತ್ತ ಬರೆಸುತ್ತೇನೆ. ಆದರೆ ನೀನು ಯುವಕ – ನಿನ್ನಿಂದ ಸಾಧ್ಯವಿಲ್ಲವೆ?'' ಹೀಗೆನ್ನುತ್ತಾ ಬಾಬಾ ಎದ್ದು ಕುಳಿತರು. ಅವರ ಕಣ್ಣು, ಮುಖ ಉಗ್ರವಾಗಿವೆ. ಅವರು ಮತ್ತೆ ಹೇಳುತ್ತಿದ್ದಾರೆ, ''ಸ್ವಾಮೀಜಿಗೆ ಇದೆಲ್ಲ ಮೊದಲೇ ಗೊತ್ತಿತ್ತು. ಆದ್ದರಿಂದಲೇ ಎಚ್ಚರಿಕೆ ನೀಡುತ್ತ ಹೇಳಿದರು – 'monastic indolence (ಸನ್ಯಾಸಿಗಳ ಆಲಸ್ಯ) ಬಹಳ ಭಯಂಕರವಾದ್ದು. ಅದರದ್ದೇ ಭಯ, ನಾಳೆ ನಮಗಾಗುವುದೂ ಇದೇ –